ತೊಂದರೆಯಾಗಿದೆ. ಮತ್ತು ನಮ್ಮ ಕಡೆ ೧೦-೧೫ ಮೈಲಿಗಳಷ್ಟು ದೂರ ಉಪ್ಪುನೀರು ಹೋಗಂತ್ತಿದೆ. ಈ ಬಗ್ಗೆ ತಜ್ಞರೂ ಕೂಡಾ ನೋಡಿಬಂದಿದ್ದಾರೆ. ಈ ಉತ್ತರದಲ್ಲಿ ತಾರತಮ್ಯ ಇರುವುದರಿಂದ ನಾನು ಪ್ರಶ್ನೆ ಕೇಳಬೇಕಾಗಿದೆ. ನೇತ್ರಾವತಿಯ ಬಗ್ಗೆ ಹೇಳುವುದಾದರೆ ರೇವೇಮಣ್ಣಿನ ಸಂಗ್ರಹಣೆಯಿಂದಾಗಿ ನೂರಾರು ಎಕರೆಯ ಭೂಮಿಯು ರೈತರು ನಷ್ಟಹೊಂದಿದ್ದಾರೆ. ಇದರಿಂದಾಗಿ ಜಲಾಶಯದ ಆಯಸ್ಸು ಕಡಿಮೆಯಾಗುವುದಿದ್ದಲ್ಲಿ ಇದನ್ನು ಗಂಭೀರವಾಗಿ ನೋಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ದಕ್ಷಿಣಕನ್ನಡದಲ್ಲಿನ ಸಮಸ್ಯೆ ಬಗ್ಗೆ ಏನು ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇವೆ. ಮತ್ತು ಈ ಬಗ್ಗೆ ಅವರ ಜೊತೆ ಸಮಾಲೋಚನೆ ಮಾಡಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

## ಘಟಪ್ರಭಾ ಬಲದಂಡೆ ಯೋಜನೆಯ ಬಗ್ಗೆ.

೨೩೯. ಶ್ರೀ ಡಾ. ವಿ. ಎಸ್. ಆಚಾರ್ಯ (ಉಡುಪಿ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಘಟಪ್ರಭಾ ಬಲದಂಡೆ ಯೋಜನೆಯು ಈಗ ಯಾವ ಹಂತದಲ್ಲಿದೆ ?

ಆ) ಬಲದಂಡೆಯ ಕಾರ್ಯ ಎಂದು ಪೂರ್ತಿಯಾಗುವ ನಿರೀಕ್ಷೆ ಇದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬಲದಂಡೆ ನಾಲೆಯ ಮೊದಲ ೩೦ ಕಿ.ಮೀ ವರೆಗಿನ ಕೆಲಸಗಳೂ, ಚಿಕ್ಕೋಡಿ ಶಾಖಾ ನಾಲೆಯ ೨೯ ಕಿ.ಮೀ. ವರೆಗಿನ ಕೆಲಸಗಳೂ, ಪ್ರಗತಿಯಲ್ಲಿವೆ. ಬಲದಂಡೆ ನಾಲೆಯ ೩೦ ರಿಂದ ೯೫ ಕಿ.ಮೀ. ವರೆಗಿನ ಕೆಲಸಗಳನ್ನು ಬರಗಾಲ ಪರಿಹಾರ ಕಾರ್ಯಕ್ರಮದಲ್ಲಿ ಎತ್ತಿಕೊಳ್ಳಲಾಗಿದೆ.

ಆ) ಹಣಕಾಸಿನ ಪರಿಸ್ಥಿತಿಯನ್ನವಲಂಬಿಸಿ, ೧೯೯೦-೯೧ರಲ್ಲಿ ಪೂರ್ತಿಗೊಳಿಸುವ ನಿರೀಕ್ಷೆ ಇದೆ.

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ, ಘಟಪ್ರಭಾ ಬಲದಂಡೆ ನಾಲೆ ಯೋಜನೆಯಲ್ಲಿ ಬರುವ ಕಡಬಗಟ್ಟ ಟನಲ್ ಕೆಲಸ ಯಾವ ಮಟ್ಟದಲ್ಲಿ ಇದೆ. ಈ ಟನಲ್ ಪೂರ್ತಿಗೊಳ್ಳದೆ ಚಿಕ್ಕೋಡಿಯ ಶಾಖಾ ನಾಲೆಯ ೨೯ ಕಿಲೋಮಿಟರ್ ವರೆಗೆ ನಾಲೆ ಪ್ರಾರಂಭವಾಗಿ ಅದರಲ್ಲಿ ನೀರು ಒದಗಿಸಲಾಗುವುದಿಲ್ಲ. ಅತೀ ಪ್ರಾಮುಖ್ಯವಾದ ಈ ಕಡಬಗಟ್ಟ ಟನಲ್ ಕೆಲಸ ಕಳೆದ ೧೦ ವರ್ಷಗಳಿಂದ ಹಿಂದೆ ಬಿದ್ದಿದೆ. ಇದನ್ನು ಎಷ್ಟು ಸಮಯದಲ್ಲಿ ಮುಗಿಸಿ ನೀರನ್ನು ಒದಗಿಸಿಕೊಡುವ ಏರ್ಪಾಡನ್ನು ಮಾಡುತ್ತೀರಿ ? ಇದು ಬಹಳ ತ್ವರಿತವಾಗಿ ಮಾಡಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಕಡಬಗಟ್ಟ ಟನಲ್ ಕೆಲಸ ೧೯೭೯ರಲ್ಲಿ ಪ್ರಾರಂಭವಾಗಿದೆ. ಅದರ ಕೆಲಸ ಪ್ರಾರಂಭ ಆಗಿ ೧೦ ವರ್ಷ ಆಗಿಲ್ಲ. ೧೯೭೯ರ ಮಾರ್ಚಿಯಲ್ಲಿ ಆರ್. ಜಿ. ಷಾ ಅಂಡ್ ಕಂಪನಿ, ಬಾಂಬೆ ಇವರಿಗೆ ಈ ಕೆಲಸವನ್ನು ವಹಿಸಲಾಗಿತ್ತು. ಮೊದಲನೇ ಅಂದಾಜು ೫೩೪.೨೪ ಲಕ್ಷ ರೂಪಾಯಿಗಳು, ಇದ್ದು, ಇಲ್ಲಿ ೭ ಕೋಟಿ ೭೯ ಲಕ್ಷ ರೂಪಾಯಿಗಳ ಕೆಲಸ ಆಗಬೇಕಾಗಿದೆ. ಹಾಗೂ ಇಲ್ಲಿ ೧೮೩.೬೧ ಲಕ್ಷದ ಮೌಲ್ಯದ ಕೆಲಸ ನಡೆದಿದ್ದು ಮಿಕ್ಕ ೫೯೫ ಲಕ್ಷ ರೂಪಾಯಿಗಳ ಕೆಲಸ ನಡೆಯಬೇಕಾಗಿದೆ ಈ ಮಧ್ಯೆ ಕೆಲವು ಸ್ಥಳೀಯ ತೊಂದರೆಗಳಿಂದಾಗಿ ಅವರು ಕ್ಲೈಮ್ ಹಾಕಿದ್ದಾರೆ. ಅಲ್ಲಿ ಕೆಲವು ತಾಂತ್ರಿಕ ತೊಂದರೆಗಳೂ ಆಗಿವೆ. ಇವುಗಳ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಘಟಪ್ರಭಾ ಯೋಜನೆಯು ರೈಟ್ ಬ್ಯಾಂಕ್ ಕ್ಯಾನಲ್ ಕೆಲಸವನ್ನು ಈಗ ಆಗಿರುವ ವರ್ಷಕ್ಕೆ ಮುಗಿಸಿದರೂ ಸುಮಾರು ೨೫,೦೦೦ ಎಕರೆಗೆ ನೀರು ಕೊಡುವುದಕ್ಕೆ ಆಗುತ್ತದೆ. ಎರಡು ಕ್ಯಾನಲ್‌ಗಳನ್ನು ಬೇಗ ಮುಗಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾರ್ಕಾಂಡೇಯ ಹಾಗೂ ಕಡಬಟ್ಟಿ ಟ್ಯಾನಲ್ ಆಗದ ಹೊರತು ನೀರು ಕೊಡುವುದಕ್ಕೆ ಸಾಧ್ಯವೇ ಇಲ್ಲ.